# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ
ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)/ವಿ.ಆರ/353/2021-22. ದಿನಾಂಕ 16-11-2021

ದಿನಾಂಕ: 08-11-2021 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ 143ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀಮತಿ. ಶಿಲ್ಪ.ಎನ್ | ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್ ಸಂಖ್ಯೆ:143 | 9480688143 |
| 3 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 4 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 5 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 6 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |

ದಿನಾಂಕ: 08-11-2021 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲಿಗೆ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ಟಿ.ವಿ.ವಿಜಯಕುಮಾರ್ ರವರು ಮಾತನಾಡಿ ಆಂಜನೇಯ ಸ್ವಾಮಿ ದೇವಸ್ಥಾನದ ರಸ್ತೆಯಲ್ಲಿ ಚರಂಡಿಯನ್ನು ಸು ಮಾಡಿ ಸ್ಥಳದಲ್ಲಿದ್ದನಿರುಪಯುಕ್ತ ಕಲ್ಲುಗಳನ್ನು ತೆರವುಗೊಳಿಸಿ ಸ್ವಚ್ಛ ಮಾಡಿರುವುದನ್ನು ಸಭೆಯ ಗಮನಕ್ಕೆ ತಂದು ಸಂತಸ ವ್ಯಕ್ತಪಡಿಸಿದರು. ನಂತರ ಮಾತು ಮುಂದುವರೆಸುತ್ತಾ, ವಿ.ವಿ.ಪುರಂನ ಎಸ್.ಬಿ. ರಸ್ತೆಯಲ್ಲಿ ಪಾರ್ಕಿಂಗ್ ಸಮಸ್ಯೆ ಉಂಟಾಗುತ್ತಿರುವುದಾಗಿ ಮತ್ತು ಸಿ.ಸಿ.ಟಿ.ವಿ.ಗಳನ್ನು ಅಳವಡಿಸುವಂತೆ ಕೋರಿದರು. ಈ ವಿಷಯವಾಗಿ ನೋಡಲ್ ಅಧಿಕಾರಿಗಳು ಸಂಬಂಧಿಸಿದ ಪೋಲಿಸ್ ಇಲಾಖೆಗಳಿಗೆ ಪತ್ರ ಬರೆಯುವಂತೆ ಕಿರಿಯ ಅಭಿಯಂತರರಿಗೆ ಸೂಚಿಸಿದರು.

ನಂತರ ಎಂ.ಎಂ.ವಿ. ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ವೆಂಕಟೇಶ್ ರವರು ಮಾತನಾಡಿ ನ್ಯಾಷನಲ್ ಹೈ ಸ್ಕೂಲ್ ರಸ್ತೆ ಹಾಗೂ ಎಂ.ಎಂ.ವಿ.ರಸ್ತೆಗಳಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಕೋರಿದರು. ಈ ವಿಷಯವಾಗಿ ವಾರ್ಡಿನ ಕಿರಿಯ ಅಭಿಯಂತರರು ಮಾತನಾಡಿ ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಪ್ರಾರಂಭಿಸಿದ್ದು ಗುಂಡಿಗಳಿಗೆ ವೆಟ್‌ಮಿಕ್ಸನ್ನು ಹಾಕಲಾಗಿರುತ್ತದೆ. ಈಗ ಮಳೆಯ ಬರುತ್ತಿರುವುದರಿಂದ ಡಾಂಬರು ಹಾಕಲು ಸಾಧ್ಯವಾಗಿರುವುದಿಲ್ಲ ಮಳೆಯು ನಿಂತ ಕೂಡಲೇ ತುರ್ತಾಗಿ ಗುಂಡಿಗಳಿಗೆ ಡಾಂಬರು ಹಾಕಿ ಮುಚ್ಚಲಾಗುವುದೆಂದು ಸಭೆಯ ಗಮನಕ್ಕೆ ತಂದರು ನಂತರ ವೆಂಕಟೇಶ್ ರವರು ಮಾತು ಮುಂದುವರೆಸಿ ಡಯಾಗನಲ್ ರಸ್ತೆಯ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕೆಂದು ಮತ್ತು ನ್ಯಾಷನಲ್ ಹೈ ಸ್ಕೂಲ್ ರಸ್ತೆ, ಹಾಗೂ ಎಂ.ಎಂ.ವಿ ರಸ್ತೆಗಳ ಮಧ್ಯೆ Road hump ಹಾಕುವಂತೆ ಎಂ.ಎಂ.ವಿ.ರಸ್ತೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮರಾ ಅಳವಡಿಸುವಂತೆ ಮತ್ತು ವಾಸವಿ ದೇವಸ್ಥಾನದ ರಸ್ತೆ ಜೈ ಶಂಕರ್ ಸ್ವಾರಿ ಪ್ಯಾಲೇಸ್ ಮುಂಭಾಗದಲ್ಲಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಕೋರಿದರು. ಈ ಸಂಬಂಧ ಸೂಕ್ತ ಕ್ರಮಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳನ್ನು ಪತ್ರ ಬರೆದು ಕೋರಲಾಗುವುದೆಂದು ಮಾನ್ಯ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಶ್ರೀ.ರಾಜು ರವರು ಮಾತನಾಡಿ ಈ ಕೆಳಕಂಡ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಿದರು. ಅವುಗಳೆಂದರೆ

1. ಆರ್.ವಿ.ರಸ್ತೆ,ಟೀಚರ್ಸ್ ಕಾಲೇಜ್ ಬಳಿಯಲ್ಲಿ Bus Shelter ನಿರ್ಮಿಸುವುದು.
2. ಕೆ.ಆರ್. ರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿರುವ ನರ್ಸರಿಯನ್ನು ತೆರವುಗೊಳಿಸುವುದು.
3. ಎಂ.ಎನ್. ಕೃಷ್ಣರಾವ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ Bollaru ಗಳನ್ನು ಅಳವಡಿಸುವುದು.
4. ಸರ್ವೇಯರ್ ರಸ್ತೆಯ ಕನ್ಸರ್‌ವೆನ್ಸಿಯಲ್ಲಿರುವ ನಾನ್‌ವೆಜ್ ಹೋಟೆಲ್‌ನ್ನು ಮುಚ್ಚುವುದು.
5. ಸರ್ವೇಯರ್ ರಸ್ತೆಯಲ್ಲಿ ವಸತಿ ಪ್ರದೇಶದಲ್ಲಿ ಹಡ್‌ವೇರ್ ಶಾಪ್ ತೆರೆಯುತ್ತಿದ್ದು ಅದನ್ನು ಮುಚ್ಚಿಸುವುದು.
6. ವಾಣಿ ವಿಲಾಸ ರಸ್ತೆ ಹಾಗೂ ಡಯಾಗನಲ್ ರಸ್ತೆಗಳು ಸೇರುವ Island ಬಳಿ ರಾತ್ರಿ ವೇಳೆ Egg Rice ಮತ್ತು ಕಬಾಬ್ ಮಾರುವ ಗಾಡಿಯನ್ನು ತೆರವುಗೊಳಿಸುವುದು.
7. ಶ್ರೀರಾಮ ಮಂದಿರ ರಸ್ತೆಯಲ್ಲಿನ ಕನ್ಸರ್‌ವೆನ್ಸಿಯಲ್ಲಿ ಹಸುಗಳನ್ನು ಸಾಕುತ್ತಿದ್ದು ಅವುಗಳನ್ನು ತೆರವುಗೊಳಿಸುವುದು.

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಾದ ಟ್ರಾಫಿಕ್ ಇಂಜನಿಯರಿಂಗ್ ಸೆಲ್ (Tee) ಮುಖ್ಯರಸ್ತೆಗಳು ಮೂಲಭೂತ

ಸೌಕರ್ಯ ಆರೋಗ್ಯ ವೈದ್ಯಾಧಿಕಾರಿಗಳು(MOH), ಪಶು ಸಂಗೋಪನಾ ಇಲಾಖೆ(Animal husbandry) ರವರುಗಳಿಗೆ ಪತ್ರವನ್ನು ಬರೆಯುವಂತೆ ಮತ್ತು ಸೂಕ್ತ ಕ್ರಮ ವಹಿಸುವಂತೆ ಮಾನ್ಯ ನೋಡಲ್ ಅಧಿಕಾರಿಗಳು ಕಿರಿಯ ಅಭಿಯಂತರರಿಗೆ ಸೂಚಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ<br>ಸಹಾಯಕ ಅಭಿಯಂತರರು<br>ವಾರ್ಡ್ -143 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು<br>ವಾರ್ಡ್ ಸಂಖ್ಯೆ: 143 ಹಾಗೂ<br>ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)